ಶ್ರೀ ಸಿದ್ದರಾಮಯ್ಯ:– Question hour ಆದಮೇಲೆ ತೆಗೆದುಕೊಳ್ಳುತ್ತೀರಾ?

ಶ್ರೀ ಪಿ.ಎಂ.ನರೇಂದ್ರಸ್ವಾಮಿ:– ಅರ್ಹರಿಲ್ಲ.

ಶ್ರೀ ಅಪ್ಪಚ್ಚು ರಂಜನ್:–ಅವೆಲ್ಲಾ ಹೇಳಬೇಡಿ. ಅರ್ಹರಿಲ್ಲ ಎಂದು ಹೇಳಬೇಡಿ. ಅರ್ಹರಿಲ್ಲ ಎಂದು ಹೇಳುವುದಕ್ಕೆ ನೀವು ಯಾರ್ರೀ?

(ಈ ಹಂತದಲ್ಲಿ ಪಕ್ಷೇತರ ಸದಸ್ಯರುಗಳಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀ ಶಿವರಾಜ ತಂಗಡಗಿ, ಶ್ರೀ ವೆಂಕಟರಮಣಪ್ಪ ಹಾಗೂ ಶ್ರೀ ಗೂಳಿಹಟ್ಟಿ ಶೇಖರ್‌ರವರು ಸದನದ ಬಾವಿಗೆ ಆಗಮಿಸಿದರು)

ಅಪ್ಪಚ್ಚು ರಂಜನ್:–ಮಾನ್ಯ ಅಧ್ಯಕ್ಷರೆ, ಈ ರೀತಿ ಸ್ಪೀಕರ್‌ರವರನ್ನು ನಿಂದಿಸಿದರೆ ಅವರನ್ನು ಹೊರಗಡೆಗೆ ಹಾಕಬೇಕಾಗುತ್ತದೆ.

(ಈ ಹಂತದಲ್ಲಿ ಪಕ್ಷೇತರ ಸದಸ್ಯರುಗಳು ಸದನದ ಬಾವಿಯೊಳಗೆ ನಿಂತು ಮಾತನಾಡುತ್ತಿದ್ದರು)

(ಗದ್ದಲ)

ಅಧ್ಯಕ್ಷರು:–ಇವರು ಅವರ ಸೀಟುಗಳಿಗೆ ಹೋಗದೇ ಹೋದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಾತನಾಡಬೇಡಿ. ಅವಕಾಶ ಕೊಡುವುದಕ್ಕೆ ನಿಯಮ ತನ್ನಿ. ನೀವು ಪ್ರಸ್ತಾಪ ಮಾಡಿ. ಹೊರಗೆ ಹಾಕುತ್ತೇನೆ. I will send you out. ನೀವು ಮತ್ತೆ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತೀರಿ ಅಷ್ಟೇ.

(ಗದ್ದಲ)

ಅಧ್ಯಕ್ಷರು:–ನಾನು ಕೊನೆಯದಾಗಿ ವಿನಂತಿಯನ್ನು ಮಾಡುತ್ತಿದ್ದೇನೆ. ನೀವು ಸೀಟುಗಳಿಗೆ ಹೋಗಿ. ಇಲ್ಲಿ ಬಂದು ಮಾತನಾಡುವುದು ಏನು? ಇಲ್ಲಿ ಏನು ಮಾತನಾಡುವುದು? No, no, I will take action.

(ಗದ್ದಲ)

ಶ್ರೀ ಜಗದೀಶ್ ಶೆಟ್ಟರ್:–ಈ ಸಭಾಧ್ಯಕ್ಷರ ಸ್ಥಾನಕ್ಕೆ ಗೌರವ ಕೊಡುವಂತಹದ್ದು ಆಗಬೇಕು. Proceedings ಅನ್ನು ಹಾಳು ಮಾಡುವಂತಹದ್ದಲ್ಲ ಇದು.

(ಗದ್ದಲ)

ಶ್ರೀ ಸಿದ್ದರಾಮಯ್ಯ:–ಮಾನ್ಯ ಅಧ್ಯಕ್ಷರೆ, ಅವರು ಹೇಳುವುದೇನೆಂದರೆ ..

ಅಧ್ಯಕ್ಷರು:–ಇದಕ್ಕೆ ಏನೂ ನೀತಿ ನಿಯಮ ಇಲ್ಲವೇ? ನಿಯಮ ಅನ್ನುವುದು ಇದೆಯಲ್ಲಾ? ಯಾವ ನಿಯಮದಲ್ಲಿ ಅವರಿಗೆ ಕೊಡಬೇಕು?

ಶ್ರೀ ಸಿದ್ದರಾಮಯ್ಯ:–ಯಾವ ನಿಯಮವಿಲ್ಲದೇ ಅವರನ್ನು ಆಚೆಗೆ ಹಾಕಿಬಿಟ್ಟಿದ್ದೀರಲ್ಲಾ? Disqualify ಮಾಡಿಬಿಟ್ಟಿದ್ದೀರಲ್ಲಾ? ಅದು ಯಾವ ನಿಯಮ?

(ಗದ್ದಲ)

ಅಧ್ಯಕ್ಷರು:–ತಾವು ಎಲ್ಲವನ್ನೂ ಹೇಳಿದ್ದೀರಲ್ಲಾ?

(ಗದ್ದಲ)

ಶ್ರೀ ಸಿದ್ದರಾಮಯ್ಯ:–ಅವರಿಗೆ ಮಾಡನಾಡುವುದಕ್ಕೆ ಅವಕಾಶ ಕೊಡಬೇಕು.

(ಗದ್ದಲ)

ಅಧ್ಯಕ್ಷರು:–ಯಾವ ನಿಯಮದಡಿ ಕೊಡಬೇಕು? ನೀವು ಆ ರೀತಿ ಹೇಳಿದರೆ ನಾವು ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

(ಗದ್ದಲ)

SIDDARAMAIAH: They have got every right.

(ಗದ್ದಲ)

ಅಧ್ಯಕ್ಷರು:– Right ಇದೆ, right ಅನ್ನು ಯಾಗೂ turndown ಮಾಡಿಲ್ಲ. Under what rule ಕೊಡಬೇಕು?

SIDDARAMAIAH: Please hear them and take a decision.

ಅಧ್ಯಕ್ಷರು:–ಇಲ್ಲಿ ಅಲ್ಲ. ಮೂರು ಜನ ಇಲ್ಲಿ, ಅಲ್ಲಿ ಒಬ್ಬರು ನಿಂತುಕೊಂಡರೆ ಅವಕಾಶ ಕೊಡುವುದಿಲ್ಲ. ಇಲ್ಲಿ ನಿಂತುಕೊಂಡರೆ ಅವರಿಗೆ ಅವಕಾಶ ಕೊಡುವುದಿಲ್ಲ. ಅಲ್ಲಿ ಹೋಗಲಿ. ಕುಳಿತುಕೊಳ್ಳಲಿ Please. ಇಲ್ಲಿ ಏಕೆ ಬರುತ್ತಾರೆ?

(ಗದ್ದಲ)

ಅಧ್ಯಕ್ಷರು:–ಮೂರು ಜನ ಇಲ್ಲಿ, ಒಬ್ಬರು ಅಲ್ಲಿ ನಿಂತುಕೊಂಡರೆ ನಾನು ಅವಕಾಶ ಕೊಡುವುದಿಲ್ಲ. ತಾವುಗಳು ಇಲ್ಲಿ ನಿಂತುಕೊಂಡರೆ ನಾನು ಅವಕಾಶ ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು:–ಅವರ ಸ್ಥಾನಕ್ಕೆ ಹೋಗಿ ಮಾತನಾಡಲಿ, ಇಲ್ಲಿ ಯಾಕೆ ಬರುತ್ತಾರೆ?

(ಗೊಂದಲ)

ಅಧ್ಯಕ್ಷರು:– That is a different issue. ಇಲ್ಲಿ ನಿಂತುಕೊಂಡು ಏನೂ ಮಾತನಾಡಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಮಾತನಾಡುವುದಕ್ಕೆ ಅವರಿಗೂ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:– ಈ ರೀತಿ ಎಲ್ಲಾ ಎದ್ದು ನಿಂತರೆ ಹೇಗೆ? ಇಲ್ಲಿ ಏಕೆ ಬರುತ್ತಾರೆ? ಇಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು):– ಪದೇ ಪದೇ ಈ ರೀತಿ ಬಾವಿಗೆ ಬಂದು ತೊಂದರೆ ಮಾಡೋ ಅವಶ್ಯಕತೆ ಏನಿದೆ? ನಿನ್ನೆಯೇ ಈ issue ಮುಗಿದು ಹೋಗಿದೆ.

ಸನ್ಮಾನ್ಯ ವಿರೋಧಪಕ್ಷದ ನಾಯಕರು ಈ ವಿಷಯದ ಬಗ್ಗೆ ಮಾತನಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ:– ಅವರಿಗೆ ನಮ್ಮ ಸಪೋರ್ಟ್ ಇದೆ...

ಶ್ರೀ ಜಗದೀಶ್ ಶೆಟ್ಟರ್:– ಈ ವಿಚಾರ ನಿನ್ನೆಯೇ ಮುಗಿದು ಹೋಗಿದೆ

ಶ್ರೀ ಸಿದ್ದರಾಮಯ್ಯ:– ಎಲ್ಲಿ ಮುಗಿದು ಹೋಗಿದೆ?

(ಗೊಂದಲ)

ಅಧ್ಯಕ್ಷರು:– ಯಾವುದೂ ಸಹ ದಾಖಲೆಗೆ ಹೋಗಬಾರದು.

(ನಡವಳಿಯನ್ನು ದಾಖಲಿಸಬಾರದೆಂದು ಮಾನ್ಯ ಅಧ್ಯಕ್ಷರು ಸೂಚಿಸಿದ್ದರಿಂದ ಈ ಹಂತದಲ್ಲಿ ನಡವಳಿಯನ್ನು ದಾಖಲಿಸಿಕೊಂಡಿರುವುದಿಲ್ಲ)

(ಗೊಂದಲ)

ಜಗದೀಶ್ ಶೆಟ್ಟರ್:– ಮಾತನಾಡುವುದಕ್ಕೆ ಅವರು ನೋಟಿಸ್ ಕೊಟ್ಟಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಅವರು ನೋಟಿಸ್ ಕೊಟ್ಟಿದ್ದಾರೆ.

ಅಧ್ಯಕ್ಷರು:– ನೋಟಿಸ್ ಎಲ್ಲಿ ಕೊಟ್ಟಿದ್ದಾರೆ? ತಪ್ಪು ಮಾಹಿತಿ ಹೋಗುವುದು ಬೇಡ. ನೋಟಿಸ್ ಕೊಡಲಿಲ್ಲ. ಕೊಟ್ಟಿದ್ದರೆ ನಮ್ಮ ಹತ್ತಿರ ಇರಬೇಕಲ್ಲವೇ? ಅವರು ಹೇಳುತ್ತಾರೆ. Rule 60 ರಲ್ಲಿ ಪ್ರಸ್ತಾಪ ಮಾಡಲು one hour early ನೋಟಿಸ್ ಕೊಡಬೇಕು. ತಾವೇಕೆ ತಪ್ಪು ಮಾಹಿತಿ ಹೇಳುತ್ತೀರಿ?

(ಗೊಂದಲ)

(ನಡವಳಿಯನ್ನು ದಾಖಲಿಸಬಾರದೆಂದು ಮಾನ್ಯ ಅಧ್ಯಕ್ಷರು ಸೂಚಿಸಿದ್ದರಿಂದ ಈ ಹಂತದಲ್ಲಿ ನಡವಳಿಯನ್ನು ದಾಖಲಿಸಿಕೊಂಡಿರುವುದಿಲ್ಲ)

ಅಧ್ಯಕ್ಷರು:–ಅವರು ನೋಟಿಸ್ ಕೊಟ್ಟಿಲ್ಲ. ಮೊದಲು ನೋಟಿಸ್ ಕೊಡಲಿ.

ಶ್ರೀ ಸಿದ್ದರಾಮಯ್ಯ:– ನಿನ್ನೆ ದಿವಸ ಕೊಟ್ಟಿದ್ದಾರೆ.

ಅಧ್ಯಕ್ಷರು:– ನಿನ್ನೆ ದಿವಸ ಕೊಟ್ಟಿಲ್ಲ. I rejected. ನಿಯಮ 60ರ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ one hour early ನೋಟಿಸ್ ಕೊಡಬೇಕು. ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ.

(ಗೊಂದಲ)

(ನಡವಳಿಯನ್ನು ದಾಖಲಿಸಬಾರದೆಂದು ಮಾನ್ಯ ಅಧ್ಯಕ್ಷರು ಸೂಚಿಸಿದ್ದರಿಂದ ಈ ಹಂತದಲ್ಲಿ ನಡವಳಿಯನ್ನು ದಾಖಲಿಸಿಕೊಂಡಿರುವುದಿಲ್ಲ)

ಅಧ್ಯಕ್ಷರು:– ಈಗ ಪ್ರಶ್ನೋತ್ತರ, ಮಾನ್ಯ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್‌ರವರೆ, ತಾವು ಪ್ರಶ್ನೆ ಕೇಳಿ.

(ಈ ಹಂತದಲ್ಲಿ ಪಕ್ಷೇತರ ಸದಸ್ಯರು ಘೋಷಣೆ ಕೂಗುತ್ತಾ ಬಾವಿಯಿಂದ ಹೊರನಡೆದರು)

2. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.